**ದಿಃ 18-07-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರವಾಗಿ** ಶ್ರೀಮತಿ ಎಸ್ ಎಚ್ **ವಕೀಲರಿಂದ**

ನನ್ನನ್ನು ಪೋಲೀಸರು ಪ್ರತ್ಯಕ್ಷ ಸಾಕ್ಷಿಯಾಗಿ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಮತ್ತು ಅವರು ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆಂದು ನುಡಿಯುತ್ತಾರೆ. ನಾನು ಚಿನ್ಮಯಿ ಆಸ್ಪತ್ರೆಯಲ್ಲಿ ಯಾವುದೇ ದಾಖಲಾತಿಗೆ ಸಹಿ ಹಾಕಿಲ್ಲ. ನಾನು ಸರಕಾರಿ ಆಸ್ಪತ್ರೆಯಲ್ಲಿ ಸಹಿ ಹಾಕಿದ್ದೇನೆ ಅಂತ ಸಾಕ್ಷಿ ನುಡಿಯುತ್ತಾರೆ. ನಾನು ಶವ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಪೋಲೀಸರು ಒಂದು ದಾಖಲಾತಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಅಂತ ನುಡಿಯುತ್ತಾರೆ. ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಫಿರ್ಯಾದಿಯನ್ನು ಪೋಲೀಸರಿಗೆ ನೀಡಿಲ್ಲ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ರವೀಂದ್ರ ಎನ್ನುವವರು ಫಿರ್ಯಾದಿ ನೀಡಿರುತ್ತಾರೆ ಎಂದರೆ ಸರಿ. ಈ ಅಪಘಾತವು ರವೀಂದ್ರ ರವರ ಅಂಗಡಿ ಎದುರುಗಡೆ ಆಗಿದ್ದು ಎಂದರೆ ಸರಿ. ರವೀಂದ್ರ ರವರು ತಾವು ನೀಡಿದ ಫಿರ್ಯಾದಿನಲ್ಲಿ ರಸ್ತೆ ದಾಟುವಾಗ ಅಪಘಾತ ಆಗಿದೆ ಎಂದು ಹೇಳಿದ್ದಾರೆಂದರೆ ಸಾಕ್ಷಿ ಸರಿ ಅಲ್ಲಾ ನಾನು ನೋಡುವಾಗ ರಸ್ತೆಯ ಪಕ್ಕದಲ್ಲಿ ಅಪಘಾತಕ್ಕೆ ಒಳಪಟ್ಟ ವ್ಯಕ್ತಿ ನಡೆದುಕೊಂಡು ಹೋಗುತ್ತಿರುವುದನ್ನು ನಾನು ನೋಡಿರುತ್ತೇನೆ ಅಂತ ನುಡಿಯುತ್ತಾರೆ. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಯಾವುದೇ ಮಣ್ಣು ರಸ್ತೆ ಇಲ್ಲಾ ಎಂದರೆ ಸಾಕ್ಷಿ ಸರಿ ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ಇಂಟರ್ ಲಾಕ್ ಇದೆ ಅಂತ ನುಡಿಯುತ್ತಾರೆ. ಸದ್ರಿ ಅಪಘಾತ ಆಗಿದೆ ಅಂತ ಹೇಳುವ ಸ್ಥಳ ವಾಹನಗಳ ಪಾರ್ಕಿಂಗ್ ಸ್ಥಳ ಆಗಿತ್ತು ಅಲ್ಲಿ ನಡೆದುಕೊಂಡು ಹೋಗಲು ಯಾವುದೇ ಅವಕಾಶ ಇರಲಿಲ್ಲ ಎಂದರೆ ಸಾಕ್ಷಿ ಸರಿ ಅಲ್ಲಾ, ಅಪಘಾತ ಸಮಯದಲ್ಲಿ ಯಾವುದೇ ವಾಹನ ಪಾರ್ಕಿಂಗ್ ಆಗಿರಲಿಲ್ಲ ಎಂದು ನುಡಿಯುತ್ತಾರೆ. ಅಪಘಾತವನ್ನು ನಾನು ನೋಡಿಯೇ ಇಲ್ಲಾ, ನಾನು ಕೇವಲ ಶವ ಪಂಚನಾಮೆಗೆ ಸಹಿ ಮಾಡಿದ್ದು ಎಂದರೆ ಸರಿ ಅಲ್ಲಾ. ಅಪಘಾತಕ್ಕೆ ಒಳಪಟ್ಟ ವಾಹನ ಚಾಲಕ ನೇರವಾದ ರಸ್ತೆಯಲ್ಲಿ ಬರುತ್ತಿದ್ದ ಎಂದರೆ ಸಾಕ್ಷಿ ಸರಿಯಾದ ರಸ್ತೆಯಲ್ಲಿ ಬರುತ್ತಿದ್ದ ಆದರೆ ರಸ್ತೆಯ ಪಕ್ಕಕ್ಕೆ ಬಂದು ಅಪಘಾತಪಡಿಸಿರುತ್ತಾನೆ ಅಂತ

ನುಡಿಯುತ್ತಾರೆ. ಮೃತ ಪುಂಡಲೀಕ ರವರು ರಸ್ತೆ ದಾಟುವಾಗ ಈ ಅಪಘಾತ ಆಗಿದ್ದರೂ ಸಹಾ ಅಪಘಾತವನ್ನು ನಾನು ನೋಡದೇ ಇದ್ದರೂ ಸಹಾ ಅವನ ವಾರೀಸುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಪ್ರಥಮ ಬಾರಿಗೆ ಇವತ್ತೇ ನಾನು ನ್ಯಾಯಾಲಯದಲ್ಲಿ ಅಪಘಾತದ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**